



# ಝುರಿ ಬೆಟ್ಟದ ಮಡಿವಾಳ ಮಾಚಿದೇವ

**ಝುರಿ ಬೆಟ್ಟದ ದೊಡ್ಡ ಬಂಡೆಯೊಂದರ ಮೇಲೆ ಕೆತ್ತಲಾಗಿರುವ ಮಡಿವಾಳ ಮಾಚಿದೇವನ ಉಬ್ಬುಶಿಲ್ಪ, ಹೋರಾಟದ ಕಥೆಯೊಂದನ್ನು ಅರುಹುವಂತಿದೆ.**

■ **ಈರಣ್ಣ ಬೆಂಗಾಲಿ**

ಸಾಮಾಜಿಕ ಅಸಮಾನತೆ ವಿರುದ್ಧ ವಚನಗಳ ಮೂಲಕ ಕ್ರಾಂತಿಯ ಕಿಡಿಹಚ್ಚಿದವರು ಮಡಿವಾಳ ಮಾಚಿದೇವ. ತಮ್ಮ ಕಾಯಕನಿಷ್ಠೆಯಿಂದ, ಕಲ್ಯಾಣ ನಾಡಿನ ಕ್ರಾಂತಿಪುರುಷ ಎನಿಸಿಕೊಂಡ ಮಾಚಿದೇವರ ಉಬ್ಬುಶಿಲ್ಪವೊಂದು ರಾಯಚೂರಿನಲ್ಲಿ ಗಮನ ಸೆಳೆಯುವಂತಿದೆ.

ರಾಯಚೂರು ನಗರದ ಹೊರವಲಯದ 'ಝುರಿ ಬೆಟ್ಟ'ಕ್ಕೆ ಹೊಂದಿಕೊಂಡ ಬೃಹತ್ ಬಂಡೆಯೊಂದರ ಮೇಲೆ ಮಡಿವಾಳ ಮಾಚಿದೇವರ ಉಬ್ಬುಶಿಲ್ಪವಿದೆ. ಈ ಶಿಲ್ಪದಲ್ಲಿ ಮಡಿವಾಳ ಮಾಚಿದೇವರು ಆನೆಯ ಸೊಂಡಿಲನ್ನು ವೀರಾವೇಶದಿಂದ ಹಿಡಿದು ನೆಲಕ್ಕೆ ಬಡಿಯುತ್ತಿದ್ದಾರೆ. ಮಾಚಿದೇವರ ಸತಿಯು ಒಂದು ಕೈಯಲ್ಲಿ ಹಾರ, ಮತ್ತೊಂದು ಕೈಯಲ್ಲಿ ತಲೆಯ ಮೇಲೆ ಬಿಂದಿಗೆ ಹಿಡಿದಿದ್ದಾಳೆ. ಆನೆ ಮೇಲೆ ಕುಳಿತ ಮಾವುತನು ಕೆಳಗೆ ಬೀಳುತ್ತಿದ್ದಾನೆ. ಉಬ್ಬುಶಿಲ್ಪದ ಹಿನ್ನೆಲೆಯಲ್ಲಿ ಸೂರ್ಯ, ಚಂದ್ರ ಮತ್ತು ಶಿವಲಿಂಗದ ಮುಂದೆ ಕುಳಿತ ನಂದಿಯನ್ನು ಕಾಣಬಹುದು.

ಮಡಿವಾಳ ಸಮುದಾಯದವರು ಈ ಉಬ್ಬುಶಿಲ್ಪಕ್ಕೆ ದೇವಾಲಯ ನಿರ್ಮಿಸಿ ಪೂಜಿಸುತ್ತಿದ್ದಾರೆ. ಈ ವಿಗ್ರಹವನ್ನು ಕ್ರಿ.ಶ. 1700ರಲ್ಲಿ ಮಾಚಯ್ಯರ ಭಕ್ತರು ಸ್ಥಾಪಿಸಿದ್ದಾರೆ ಎನ್ನಲಾಗಿದೆ. ಬೆಟ್ಟದಲ್ಲಿ ನೀರು ಝುರಿಯಾಗಿ ಹರಿದು ಬರುವ ಕಾರಣ ಈ ಬೆಟ್ಟಕ್ಕೆ 'ಝುರಿ ಬೆಟ್ಟ' ಎಂದು ಕರೆಯಲಾಗುತ್ತದೆ. ಈ ಮುನ್ನ ಇದೇ ಜಾಗದಲ್ಲಿ 'ಕಾಗೆ ಕೆರೆ' ಇದ್ದು, ಇಲ್ಲಿ ಮಡಿವಾಳರು ಬಟ್ಟೆ ಶುಚಿಗೊಳಿಸಲು ಬಳಸುತ್ತಿದ್ದರು. ಈ ಕೆರೆಯಲ್ಲಿ ಮಿಂದು ಮಾಚಯ್ಯನಿಗೆ ಪೂಜೆ ಸಲ್ಲಿಸಿ ಮುಂದೆ ಸಾಗುತ್ತಿದ್ದರು ಎಂದು ಸಾಹಿತಿ ಜಂಬಣ್ಣ ಅಮರಚಿಂತರು 'ಕಲ್ಯಾಣ ನಾಡಿನ ಕ್ರಾಂತಿ ಪುರುಷ ಮಡಿವಾಳ ಮಾಚಿತಂದೆ' ಕೃತಿಯಲ್ಲಿ ದಾಖಲಿಸಿದ್ದಾರೆ.

ಝುರಿಬೆಟ್ಟದ ಕುರಿತು ಅಮರಚಿಂತರು ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ. "ಝುರಿ ಬೆಟ್ಟದ ಮಾಚಯ್ಯ ಎನ್ನುವ ಹೆಸರು ಅತ್ಯಂತ ಸಾಂಕೇತಿಕವಾಗಿದೆ. ವಿಶಾಲ ಬೆಟ್ಟದ ಕಲ್ಲು ವ್ಯವಸ್ಥೆಯನ್ನು ಪ್ರತಿನಿಧಿಸಿದರೆ, ಬೆಟ್ಟದೆದೆಯಿಂದ ಪುಟಿದೇಳುವ ಝುರಿಗಳು ಹೊಸ ಸಮಾಜ ನಿರ್ಮಿಸಲು ಹೋರಾಡಿದ ಮಾಚಯ್ಯ, ಬಸವಾದಿ ಶರಣರನ್ನು ಪ್ರತಿನಿಧಿಸುತ್ತವೆ. ಶೋಷಣೆ ಮತ್ತು ನಿರಂತರ ಹೋರಾಟದ ಪ್ರತೀಕವಾಗಿ 'ಝುರಿ ಬೆಟ್ಟ' ನಿಂತಿದೆ."

ಝುರಿ ಬೆಟ್ಟದಲ್ಲಿರುವ ಮತ್ತೊಂದು ಉಬ್ಬುಶಿಲ್ಪ ಈ ದೇವಸ್ಥಾನದ ಕೆಳಗಿನ ಬೃಹತ್ ಬಂಡೆಯಲ್ಲಿ ಕಂಡುಬರುತ್ತದೆ. ಆದರೆ ಅಲ್ಲಿ ಮಾವುತನಿಲ್ಲ. ಶಿವಲಿಂಗ, ಸೂರ್ಯ, ಚಂದ್ರರಿಲ್ಲ. ಅಲ್ಲಿ ನಮಗೆ ಕಂಡುಬರುವುದು ಮಾಚಿದೇವರು, ಆತನ ಸತಿ, ಆನೆ ಮತ್ತು ನಂದಿ ಮಾತ್ರ. ಈ ಉಬ್ಬುಶಿಲ್ಪಕ್ಕೆ ಪೂರಕವಾದ ಯಾವುದೇ ಶಾಸನಗಳು ಕಂಡುಬಂದಿಲ್ಲ. ಉಬ್ಬುಶಿಲ್ಪದ ತಾತ್ಪರ್ಯದ ಕುರಿತೂ ಮಾಹಿತಿಯಿಲ್ಲ. ಚಾರಿತ್ರಿಕವಾದ ಈ ಪ್ರದೇಶದ ಕುರಿತು ಸಂಶೋಧನೆ ಕೈಗೊಂಡರೆ ಮತ್ತಷ್ಟು ವಿಷಯಗಳು ಸಿಗಬಹುದು.

ಪ್ರತಿಕ್ರಿಯಿಸಿ: feedback@sudha.co.in

